<u>ದಿನಾಂಕಃ 06-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

1. ನಾನು 10 ನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಆಂಗ್ಲ ಭಾಷೆ ಸುಮಾರಾಗಿ ಬರುತ್ತದೆ. ನಾನು ವಕೀಲರ ಮೂಲಕ ಆರೋಪಿಗೆ ಕೊಟ್ಟ ನೋಟೀಸಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ತಿಳಿದುಕೊಂಡಿದ್ದೇನೆ ಎಂದರೆ ಸರಿ. ನಾನು ನಾಗಮಂಗಲ ಪಟ್ಟಣದಲ್ಲಿ ಟೈಲರಿಂಗ್ ಮತ್ತು ಗುಜರಿ ವ್ಯಾಪಾರ ಮಾಡುತ್ತೇನೆ. ಸದರಿ ವ್ಯಾಪಾರ ಮಾಡಲು ಪುರಸಭೆಯಿಂದ ಪರವಾನಗಿ ಪಡೆದಿಲ್ಲ. ಟೈಲರಿಂಗ್ ಕೆಲಸದಲ್ಲಿ ಯಾವುದೇ ನೌಕರ ನಿಯೋಜಿಸಿಕೊಂಡಿಲ್ಲ. ನನ್ನ ವಾರ್ಷಿಕ ಆದಾಯ ಎಲ್ಲಾ ಖರ್ಚು ಕಳೆದು ರೂಪಾಯಿ 15 ರಿಂದ 25,000/- ಇರುತ್ತದೆ. ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ನಾನು ಪ್ರತಿ ತಿಂಗಳು ರೂಪಾಯಿ 3,500/- ಬಾಡಿಗೆ ಕೊಡುತ್ತಿದ್ದೇನೆ. ನಾನು ಟೈಲರಿಂಗ್ ಮತ್ತು ಗುಜರಿ ವ್ಯಾಪಾರ ಮಾಡುತ್ತೇನೆಂದು ತೋರಿಸಲು ಯಾವುದೇ ದಾಖಲೆ ಇಲ್ಲ.

ನನಗೆ ಒಂದು ಗಂಡು, ಎರಡು ಹೆಣ್ಣು ಮಕ್ಕಳು. ನನ್ನ ಹೆಣ್ಣು ಮಕ್ಕಳ ಮದುವೆ 2013 ಮತ್ತು 2014 ರಲ್ಲಿ ಮಾಡಿಸಿದ್ದೇನೆ. ನನ್ನ ಮಗ ಹಾರ್ಡವೇರ್ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಾರೆ. ನನ್ನ ಮಗ ನನ್ನ ಜೊತೆಗೆ ವಾಸವಾಗಿದ್ದಾನೆ. ನಿಮ್ಮ ಮನೆಯ ವ್ಯವಹಾರ ನೀವೇ ನೋಡಿಕೊಳ್ಳುತ್ತೀರಾ ಎಂದರೆ ಸಾಕ್ಷಿ ನಾನು ಮತ್ತು ನನ್ನ ಮಗ ನೋಡಿಕೊಳ್ಳುತ್ತೇವೆ. ನನ್ನ ಮಗನ ಮದುವೆ 2019 ರಲ್ಲಿ ಆಗಿದೆ. ಅವನಿಗೆ 3 ವರ್ಷದ ಒಂದು ಗಂಡು ಮಗುವಿದೆ. ನನ್ನ ಮಗನ ಮದುವೆಗೆ ಸುಮಾರು 4 ಲಕ್ಷ ರೂಪಾಯಿ ಖರ್ಚಾಗಿದೆ. ಹೆಣ್ಣು ಮಕ್ಕಳ ಮದುವೆಗೆ ಸುಮಾರು ಐದೈದು ಲಕ್ಷ ಖರ್ಚಾಗಿದೆ. ಹೆಣ್ಣುಮಕ್ಕಳ ಮದುವೆ ಸಮಯದಲ್ಲಿ 2011-12 ರ ಸುಮಾರಿಗೆ ನನ್ನ ಒಂದು ಮನೆ ರೂಪಾಯಿ 15 ಲಕ್ಷಕ್ಕೆ ಮಾರಾಟ ಮಾಡಿದ್ದೆ. ನಂತರ ಇನ್ನೊಂದು ಮನೆ ಹಾಗು 02 ಗುಂಟೆ ಜಾಗ ಸಹ ಮಾರಾಟ ಮಾಡಿದ್ದೇನೆ. ಸದರಿ ಕ್ರಯ ವ್ಯವಹಾರದ ದಾಖಲೆ ಹಾಜರುಪಡಿಸುತ್ತೇನೆ. ಮಕ್ಕಳ ಮದುವೆಯ ಮೊದಲು ನಾನು ಯಾವುದೇ ಸಾಲ ಪಡೆದಿರಲಿಲ್ಲ. ನಿವೇಶನ ಮತ್ತು ಮನೆ ಮಾರಾಟದ ಹಣ ಮದುವೆಗೆ ಖರ್ಚಾಗಿ ಉಳಿದುಕೊಂಡಿರುತ್ತದೆ. ನಾನು 8-9 ವರ್ಷದಿಂದ ಕೆನರಾ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದೇನೆ. ಸದರಿ ಖಾತೆಗೆ ಚೆಕ್ ಪುಸ್ತಕ ಪಡೆದಿದ್ದೇನೆ. ನಾನು ಯಾವುದೇ ವ್ಯವಹಾರ ಮಾಡುವಾಗ

ಚೆಕ್ ಮೂಲಕ ಮಾಡುತ್ತೆನೆ ಎಂದರೆ ಸರಿಯಲ್ಲ, ಹೆಚ್ಚಾಗಿ ನಗದು ರೂಪದಲ್ಲಿ ಮಾಡುತ್ತೇನೆ. ನಾನು ಆಸ್ತಿ ಮಾರಾಟದಿಂದ ಬಂದ ಹಣ ಬ್ಯಾಂಕ್ ನಲ್ಲಿ ಇಟ್ಟಿರಲಿಲ್ಲ, ಮನೆಯಲ್ಲಿ ಇಟ್ಟುಕೊಂಡಿದ್ದೆ. ಮಕ್ಕಳು ಮದುವೆಗೆ ಖರ್ಚು ಮಾಡಿದ ನಂತರ ನನ್ನ ಹತ್ತಿರ ಮನೆಯಲ್ಲಿ ರೂಪಾಯಿ 8-9 ಲಕ್ಷ ನಗದು ಹಣ ಉಳಿದಿತ್ತು. ಸದರಿ ಹಣ ನನ್ನ ಖಾತೆಗೆ ಜಮಾ ಮಾಡಲು ತೊಂದರೆ ಇರಲಿಲ್ಲ, ವ್ಯವಹಾರಕ್ಕಾಗಿ ನನ್ನ ಹತ್ತಿರ ಇಟ್ಟುಕೊಂಡಿದ್ದೆ. ನನ್ನ ಹತ್ತಿರ ಅಷ್ಟು ನಗದು ಹಣ ಇರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ 35 ವರ್ಷ ವಯಸ್ಸು. ನನ್ನ ಮಗನಿಗೆ ಹಾರ್ಡವೇರ್ ಅಂಗಡಿಯಲ್ಲಿ ಪ್ರತೀ ತಿಂಗಳು ರೂಪಾಯಿ 20,000/- ಸಂಬಳ ಬರುತ್ತದೆ. ನನ್ನ ಮಗನಿಗೆ ಅಷ್ಟು ಸಂಬಳ ಬರುತ್ತದೆಂದು ತೋರಿಸಲು ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ನಾನು ಆದಾಯ ತೆರಿಗೆ ಕಟ್ಟುತ್ತಿಲ್ಲ. ನನ್ನ ಬ್ಯಾಂಕ್ ಖಾತೆಯ ಸ್ಟೇಟ್ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಆರೋಪಿ ನನಗೆ 5-6 ವರ್ಷಗಳಿಂದ ಪರಿಚಯ. ಆರೋಪಿಯ ಮನೆಯ ಹತ್ತಿರ ನಮ್ಮ ನೆಂಟರ ಮನೆಯಿದ್ದು ನಾನು ಅಲ್ಲಿ ಆಗಾಗ ಹೋಗುತ್ತಿದ್ದು, ಆರೋಪಿ ಒಂದು ರಂಜಾನ್ ಸ್ಕೀಂ ನಡೆಸುತ್ತಾರೆ, 4 ವರ್ಷದ ಹಿಂದೆ ನನಗೂ ಆ ಯೋಜನೆಯಲ್ಲಿ ತೆಗೆದುಕೊಂಡಿದ್ದರಿಂದ ನನಗೆ ಆರೋಪಿಯ ಪರಿಚಯವಿದೆ. ನನ್ನ ನೆಂಟರ ಹೆಸರು ನಾಜಿನಿ ಇದ್ದು ಅವರು ಗೃಹಿಣಿಯಾಗಿದ್ದು ನನಗೆ ಕಸಿನ್ ಆಗಬೇಕು. ಅವರ ಗಂಡ ಟಿವಿ ರಿಪೇರಿ ಮಾಡುತ್ತಾರೆ. ಆರೋಪಿ ಮೈಸೂರಿನ ಬಡಮಕಾನ್ ಪ್ರದೇಶದಲ್ಲಿ ಇರುತ್ತಾರೆ ಹಾಗೂ ಅವರ ಪಡಿತರ ಅಂಗಡಿ ಹತ್ತಿರ ನನಗೆ ಅವರ ಪರಿಚಯವಾಗಿದೆ. ಆರೋಪಿಯ ಮನೆ ಮತ್ತು ಪಡಿತರ ಅಂಗಡಿಯ ವಿಳಾಸ ಗೊತ್ತಿಲ್ಲ. ಆರೋಪಿಯ ಮನೆ ಮತ್ತು ಪಡಿತರ ಅಂಗಡಿ ಸ್ವಲ್ಪ ದೂರದಲ್ಲಿ ಇದ್ದು ಸದರಿ ಏರಿಯಾ ಹೆಸರು ಗೊತ್ತಿಲ್ಲ. ನಮ್ಮ ಕಸಿನ್ ಮನೆಯಿಂದ ಎರಡು ಗಲ್ಲಿ ಬಿಟ್ಟು ಆರೋಪಿಯ ಮನೆ ಇರುತ್ತದೆ. ನಾನು ಆರೋಪಿಯ ಮನೆಗೆ ಹೋಗಿಲ್ಲ. ಆರೋಪಿಯ ನ್ಯಾಯಬೆಲೆ ಅಂಗಡಿಗೆ ನಾಲ್ಕೈದು ಸಲ ಹೋಗಿದ್ದೇನೆ ಹಾಗೂ ಅದು ಆರೋಪಿಗೆ ಸೇರಿರುತ್ತದೆ. ಆರೋಪಿಯ ಗಂಡನ ಹೆಸರು ಗೊತ್ತಿಲ್ಲ ಹಾಗೂ ಅವರಿಗೆ ನಾನು ನೋಡಿಲ್ಲ. ಆರೋಪಿಗೆ ಎಷ್ಟು ಮಕ್ಕಳು ಗೊತ್ತಿಲ್ಲ. ಆರೋಪಿಯ ಕುಟುಂಬದಲ್ಲಿ ಯಾರ್ಯಾರು ವಾಸವಾಗಿದ್ದಾರೆ ಗೊತ್ತಿಲ್ಲ. ನನಗೆ ಆರೋಪಿಯ ಕುಟುಂಬದ ವೈಯುಕ್ತಿಕ ಮಾಹಿತಿ ಇಲ್ಲ.

ನಾನು ದಿನಾಂಕ 15/03/2022 ರಂದು ಆರೋಪಿಗೆ ರೂಪಾಯಿ 1,50,000/- ಹಣ ಕೊಟ್ಟಿದ್ದೇನೆ. ಅದರ ಮೊದಲೂ ಸಹ ನನ್ನ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರ ಇತ್ತು. ಅವರು

ರೂಪಾಯಿ 25 ರಿಂದ 35,000/- ಹಣ ನಗದಾಗಿ ಪಡೆದು ನಗದಾಗಿ ವಾಪಸ್ಸು ಕೊಡುತ್ತಿದ್ದರು. ಈ ಪ್ರಕರಣದ ಹಣ ಕೊಡುವ ಮೊದಲು ಒಂದುವರೆ ಎರಡು ವರ್ಷದಿಂದ ನಮ್ಮ ನಡುವೆ ಹಣದ ವ್ಯವಹಾರ ಇತ್ತು ಮತ್ತು ಸುಮಾರು ನಾಲ್ಕೈದು ಸಲ ಅವರು ನನ್ನ ಹತ್ತಿರ ಹಣ ಪಡೆದಿದ್ದರು. ಆ ಸಮಯದಲ್ಲಿ ನಾನು ಅವರಿಂದ ಯಾವುದೇ ದಾಖಲೆ ಪಡೆಯದೇ ಹಣ ಕೊಡುತ್ತಿದ್ದೆ. ಹಣ ಕೊಡುವ ಐದು ದಿನ ಹಿಂದೆ ಆರೋಪಿ ಮೈಸೂರಿನಲ್ಲಿ ನನ್ನ ಹತ್ತಿರ ಹಣ ಕೇಳಿದ್ದರು, ನಾನು ಅವರಿಗೆ ನಾಗಮಂಗಲದ ನನ್ನ ಟೈಲರಿಂಗ್ ಅಂಗಡಿಯಲ್ಲಿ ಹಣ ಕೊಟ್ಟಿದ್ದೇನೆ. ಆ ಸಮಯದಲ್ಲಿ ಮೂರನೇ ವ್ಯಕ್ತಿ ಯಾರೂ ಇರಲಿಲ್ಲ. ಆಗ ಮದ್ಯಾಹ್ನ 3-4 ಗಂಟೆ ಸಮಯವಾಗಿತ್ತು. ರೂಪಾಯಿ ಐನೂರು, ಇನ್ನೂರು, ನೂರು ರೂಪಾಯಿ ಮುಖಬೆಲೆಯ ಹಣ ಸೇರಿಸಿ ಕೊಟ್ಟಿದ್ದೇನೆ. ಆರೋಪಿ ಕಷ್ಟ ಇದೆ ಮೂರು ತಿಂಗಳಿನಲ್ಲಿ ಹಣ ವಾಪಸ್ಸು ಕೊಡುತ್ತೇನೆ ಎಂದು ಹೇಳಿ ಹಣ ಪಡೆದಿದ್ದರು. ಆರೋಪಿ ಸದರಿ ಹಣ ಹೇಗೆ ವಾಪಸ್ಸು ಕೊಡುತ್ತಾರೆ ಎಂದು ನಾನು ಕೇಳಿಲ್ಲ. ಹಣ ನನ್ನ ಖಾತೆಗೆ ಜಮಾ ಮಾಡಿ ಆರೋಪಿಗೆ ಚೆಕ್ ಮೂಲಕ ಕೊಡಲು ತೊಂದರೆ ಇರಲಿಲ್ಲ ಎಂದರೆ ಸರಿ, ನಗದು ಹಣ ಇದ್ದರಿಂದ ನಗದಾಗಿ ಕೊಟ್ಟಿದ್ದೇನೆ. ಆರೋಪಿ ಹಣ ಕೇಳುವ ಸಮಯದಲ್ಲಿ ಸಹ ಮೂರನೇ ವ್ಯಕ್ತಿ ಇರಲಿಲ್ಲ. ನಾನು ಯಾರಿಗಾದರೂ ಹಣ ಕೊಡುವಾಗ ಅವರಿಂದ ದಾಖಲೆ ಪಡೆದು ಹಣ ಕೊಡುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಟ್ಟ ದಿನದಂದು ಅವರಿಂದ ಯಾವುದೇ ದಾಖಲೆ ಪಡೆದಿಲ್ಲ. ನನಗೆ ಸದರಿ ದಿನ ಆರೋಪಿಯಿಂದ ದಾಖಲೆ ಅಥವಾ ಚೆಕ್ ಪಡೆಯಲು ತೊಂದರೆ ಇರಲಿಲ್ಲ. ನಾನು ಮೂರು ತಿಂಗಳ ನಂತರ ಮೈಸೂರಿಗೆ ಹೋಗಿ ಆರೋಪಿಯ ಹತ್ತಿರ ಹಣ ಕೇಳಿದ್ದೇನೆ. ಅವರು 6 ನೇ ತಿಂಗಳ 20 ನೇ ತಾರೀಖಿನಂದು ನಾಗಮಂಗಲದಲ್ಲಿ ಬಂದು ನನಗೆ ಚೆಕ್ ನೀಡಿದ್ದಾರೆ. ನನ್ನ ಅಂಗಡಿಯಲ್ಲಿ ಚೆಕ್ ಕೊಟ್ಟಿದ್ದು ಆಗ ಸಹ ಮೂರನೇ ವ್ಯಕ್ತಿ ಇರಲಿಲ್ಲ.

ಚೆಕ್ ನಲ್ಲಿ ಬರವಣಿಗೆಯ ಇಂಕ್ ಮತ್ತು ಸಹಿಯ ಇಂಕ್ ನಲ್ಲಿ ವ್ಯತ್ಯಾಸವಿದೆ ಎಂದರೆ ಸರಿ. ಆರೋಪಿ ನನಗೆ ಚೆಕ್ ಕೊಡಲು ಬಂದಾಗ ಅದರಲ್ಲಿ ಮೊದಲೇ ಬರವಣಿಗೆ ಮಾಡಿಕೊಂಡು ಬಂದಿದ್ದರು, ನನ್ನ ಮುಂದೆ ಸಹಿ ಮಾತ್ರ ಮಾಡಿಕೊಟ್ಟಿದ್ದಾರೆ. ಚೆಕ್ ನಲ್ಲಿಯ ಬರವಣಿಗೆ ಆರೋಪಿಯ ಬರವಣಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ಕೊಟ್ಟ ಮಾರನೇಯ ದಿನ ನಗದೀಕರಣಕ್ಕೆ ಸಲ್ಲಿಸಿದ್ದೇನೆ. ಚೆಕ್ ನಗದೀಕರಣಕ್ಕೆ ಸಲ್ಲಿಸುವ ಮೊದಲು ಆರೋಪಿಗೆ ಪೋನ್ ಮೂಲಕ ತಿಳಿಸಿಲ್ಲ, ಅವರು ಮೊದಲೇ ಹೇಳಿದ್ದರಿಂದ ನಗದೀರಕಣಕ್ಕೆ ಸಲ್ಲಿಸಿದ್ದೇನೆ. ಆರೋಪಿಯ

ಹತ್ತಿರ ನಗದು ಹಣ ಕೇಳಲು ತೊಂದರೆ ಇರಲಿಲ್ಲ, ಆದರೆ ಅವರು ಚೆಕ್ ಕೊಡುವುದಾಗಿ ಹೇಳಿದ್ದರು. ಆರೋಪಿ ನನಗೆ ಒಂದೇ ಚೆಕ್ ಕೊಟ್ಟಿದ್ದಾರೆ. ಖಾತೆಯಲ್ಲಿ ಹಣ ಇಲ್ಲ ಎಂದು ಚೆಕ್ ವಾಪಸ್ಸ್ ಬಂದಿದೆ. ಸದರಿ ವಿಚಾರ ಆರೋಪಿಗೆ ತಿಳಿಸಿಲ್ಲ. ನನ್ನ ಮೊಬೈಲ್ ಸಂಖ್ಯೆ. 9741373751. ಸದರಿ ಸಂಖ್ಯೆ 7-8 ವರ್ಷದಿಂದ ಉಪಯೋಗಿಸುತ್ತಿದ್ದೇನೆ. ಆರೋಪಿಯ ಮೊಬೈಲ್ ಸಂಖ್ಯೆ ಗೊತ್ತಿಲ್ಲ. ಆರೋಪಿಯ ಮೊಬೈಲ್ ಸಂಖ್ಯೆ ಪಡೆದು ಹಣಕಾಸಿನ ವ್ಯವಹಾರ ಮಾತನಾಡಲು ತೊಂದರೆ ಇರಲಿಲ್ಲ. ಚೆಕ್ ಅಮಾನ್ಯವಾದ ನಂತರ ನಾನು ವಕೀಲರ ಮೂಲಕ ಆರೋಪಿಗೆ ನೊಟೀಸ್ ಕೊಟ್ಟಿದ್ದೇನೆ. ಸದರಿ ನೊಟೀಸ್ ಆರೋಪಿಗೆ ತಲುಪಿದ ಬಗ್ಗೆ ಗೊತ್ತಿಲ್ಲ. ನೊಟೀಸ್ ಕಳುಹಿಸಿದ ನಂತರ ಆರೋಪಿ ನನ್ನ ಹತ್ತಿರ ಬಂದಿಲ್ಲ ಹಾಗೂ ಫೋನಿನಲ್ಲಿ ಸಹ ಮಾತನಾಡಿಲ್ಲ. ನಿ.ಪಿ 5 ಅಂಚೆ ಸ್ವೀಕೃತಿಯಲ್ಲಿ ಇರುವ ಸಹಿ ಯಾರದು ಗೊತ್ತಿಲ್ಲ. ನಿಪಿ-1 ಚೆಕ್ ನಲ್ಲಿಯ ಸಹಿ ಮತ್ತು ನಿಪಿ-5 ಅಂಚೆ ಸ್ವೀಕೃತಿಯಲ್ಲಿಯ ಸಹಿಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿ. ಸದರಿ ಸಹಿಗಳು ಬೇರೆ ಬೇರೆ ವ್ಯಕ್ತಿ ಮಾಡಿರುತ್ತಾರೆ ಎಂದರೆ ಸರಿ. ನೋಟೀಸು ಆರೋಪಿಗೆ ತಲುಪಿಲ್ಲ ಎಂದರೆ ಸುಳ್ಳು. ಪೋಸ್ಟ್ ಮನ್ ಜೊತೆಗೆ ಸಾಮೀಲಾಗಿ ಅಂಚೆ ಸ್ವೀಕೃತಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಅಂಚೆ ಸ್ವೀಕೃತಿ ದಾಖಲೆ ಅಂಚೆ ಇಲಾಖೆಯಿಂದ ಜಾರಿಯಾದ ಸ್ವೀಕೃತಿಯ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೊಟೀಸ್ ತಲುಪಿಲ್ಲ ಎಂಬ ಕಾರಣಕ್ಕೆ ಅವರು ಉತ್ತರ ನೀಡಿಲ್ಲ ಹಾಗೂ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವತ್ತಿಗೂ ಬಡ್ಡಿಗೆ ಹಣ ಕೊಟ್ಟಿಲ್ಲ. ರೂಪಾಯಿ 1,50,000/- ಹಣ ಸಹ ಯಾವುದೇ ಬಡ್ಡಿ ಇಲ್ಲದೇ ಕೊಟ್ಟಿದ್ದೆ. ನಾನು ಬೇರೆ ಯಾರಿಗೂ ಹಣ ಕೊಟ್ಟಿಲ್ಲ, ಒಂದುವೇಳೆ ಕೊಟ್ಟರೆ ಬಡ್ಡಿರಹಿತ ಹಣ ಕೊಡುತ್ತೇನೆ. ನಾನು ನಾಗಮಂಗಲ ನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ಇನ್ನೊಂದು ಪ್ರಕರಣ ದಾಖಲಿಸಿದ್ದೇನೆ. ನಾಜಿಂ ಪಾಷ ಎಂಬುವವರಿಗೆ ರೂಪಾಯಿ 2,50,000/- ಹಣ ಕೊಟ್ಟಿದ್ದೆ, ಅದರ ವಸೂಲಾತಿಗಾಗಿ ಪ್ರಕರಣ ದಾಖಲಿಸಿದ್ದೇನೆ. ಎರಡು ವರ್ಷದ ಹಿಂದೆ ಸದರಿ ಪ್ರಕರಣ ದಾಖಲಿಸಿದ್ದು ಅದರ ಸಂಖ್ಯೆ ಗೊತ್ತಿಲ್ಲ. ನಾನು ಅವರಿಗೆ 2019 ರಲ್ಲಿ ಹಣ ಕೊಟ್ಟಿದ್ದೇನೆ. ನನ್ನ ಮೇಲೆ ಬೇರೆ ಯಾರೂ ಸಹ ಹಣ ವಸೂಲಾತಿ ಪ್ರಕರಣ ದಾಖಲಿಸಿಲ್ಲ.

ಖುರ್ರಂ ಪಾಷ ನನಗೆ 20 ವರ್ಷದಿಂದ ಪರಿಚಯ. ಅವರು ಇದೇ ನ್ಯಾಯಾಲಯದಲ್ಲಿ ಸಿಸಿ 37/2022 ಪ್ರಸ್ತುತ ಆರೋಪಿಯ ಮೇಲೆ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ಖುರ್ರಂ

ಪಾಷ ಒಟ್ಟಿಗೆ ನ್ಯಾಯಾಲಯಕ್ಕೆ ಬರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಪೂರ್ಣ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ರಂಜಾನ್ ಯೋಜನೆಯಲ್ಲಿ ಖುರ್ರಂ ಪಾಷ ಸದಸ್ಯರಾಗಿದ್ದರು ಹಾಗೂ ಬೇರೆಯವರ ಸದಸ್ಯತ್ವ ಸಹ ಮಾಡಿಸುತ್ತಿದ್ದರು ಎಂದರೆ ಗೊತ್ತಿಲ್ಲ. 2020-21 ರಲ್ಲಿ ನಾನು ಸದರಿ ಯೋಜನೆಯ ಸದಸ್ಯನಾಗಿದ್ದೆ ಹಾಗೂ ಆ ಸಮಯದಲ್ಲಿ ನನಗೆ ಬರಬೇಕಾದ ಲಾಭವನ್ನು ಕೊಟ್ಟಿರುತ್ತಾರೆ. ನಾನು ರೂಪಾಯಿ 1,200/- ಹಣ ಕೊಟ್ಟು ಆರೋಪಿಯಿಂದ ಒಂದು ಕಾರ್ಡ್ ಪಡೆದಿದ್ದೆ. ಅದರಲ್ಲಿ 25 ಕೆ.ಜಿ ಅಕ್ಕಿ, ಎಣ್ಣೆ, ಬೇಳೆ, ಸಕ್ಕರೆ ಮುಂತಾದ ದಿನಸಿ ಕೊಡುತ್ತಿದ್ದರು. ಕಾರ್ಡ್ ನಲ್ಲಿ ಹಣ ನಮೂದಿಸಿ ಕೊಡುತ್ತಿದ್ದರು ಹಾಗೂ ಕಾರ್ಡ್ ವಾಪಸ್ಸು ಪಡೆದು ದಿನಸಿ ಕೊಡುತ್ತಿದ್ದರು. ನಾವು ಕಟ್ಟಿದ ಹಣಕ್ಕೆ ಕಾರ್ಡ ಮಾತ್ರ ಕೊಡುತ್ತಿದ್ದರು, ನಾನು ಭದ್ರತೆಗಾಗಿ ಬೇರೆ ದಾಖಲೆ ಪಡೆಯುತ್ತಿರಲಿಲ್ಲ. ನಾನು ಅಷ್ಟು ಹಣ ಕೊಡಲು ಪ್ರತ್ಯೇಕವಾಗಿ ಮೈಸೂರಿಗೆ ಹೋಗುತ್ತಿರಲಿಲ್ಲ, ಬೇರೆ ಕೆಲಸಕ್ಕೆ ಹೋದಾಗ ಸ್ವಲ್ಪ ಸ್ವಲ್ಪ ಹಣ ಎಂದರೆ ಇನ್ನೂರು- ಮುನ್ನೂರು ಕೊಡುತ್ತಿದ್ದೆ. ನಾನು ದಾಖಲಿಸಿದ ಇನ್ನೊಂದು ಪ್ರಕರಣದ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ